# ಬುದ್ಧಿವಂತನಿಗೆ ಗೆಲುವು



ಪ್ರಾಚೀನ ಕಾಲದ ದಾಯ್ ಜನಾಂಗದಲ್ಲಿ ನಮ್ಮ ತೆನಾಲಿ ರಾಮಕೃಷ್ಣ, ಬೀರಬಲ್ಲನಂತೆ ಐಸು ಮತ್ತು ಐಶಿ ಎಂಬ ಸಹೋದರರು ತಮ್ಮ ಚುರುಕು ಬುದ್ಧಿವಂತಿಕೆಗೆ ಬಹಳ ಹೆಸರಾಗಿದ್ದರು. ಈ ಸಹೋದರರನ್ನು ಕಂಡರೆ ಆ ಊರಿನ ಶ್ರೀಮಂತನೊಬ್ಬನಿಗೆ ಸದಾಕಾಲ ಹೊಟ್ಟೆ ಉರಿಯುತ್ತಿತ್ತು. ಏನಾದರೂ ಮಾಡಿ ಇವರನ್ನು ಮೂರ್ಖರನ್ನಾಗಿಸಿ ಸೋಲಿಸಬೇಕೆಂದು ಅವನ ಮಹದಾಸೆಯಾಗಿತ್ತು.

ಒಂದು ದಿನ ಅವನು ಸುತ್ತಲೂ ಸೇರಿದ್ದ ಜನರಿಗೆ ‘ಇಂದು ನಾನು ಏನಾದರೂ ಮಾಡಿ ಐಶಿಯನ್ನು ಮೂರ್ಖನನ್ನಾಗಿ ಮಾಡಿಯೇ ತೀರುತ್ತೇನೆ’ ಎಂದು ಹೇಳಿ ತನ್ನ ಸೇವಕರಿಗೆ ಐಶಿಯನ್ನು ಕರೆದುಕೊಂಡು ಬರುವಂತೆ ಆಜ್ಞಾಪಿಸಿದನು. ಸ್ವಲ್ಪ ಹೊತ್ತಿನಲ್ಲೇ ಐಶಿ ಅಲ್ಲಿಗೆ ಬಂದನು. ಶ್ರೀಮಂತ ಕಾಲಿನ ಮೇಲೆ ಕಾಲು ಹಾಕಿ ಕುರ್ಚಿಯ ಮೇಲೆ ಕುಳಿತಿದ್ದ. ಐಶಿ ಬಂದವನೇ ಸ್ವಲ್ಪ ದೂರದಲ್ಲೇ ನಿಂತು ಶ್ರೀಮಂತನಿಗೆ ಕೈಮುಗಿದ. ಆಗ ಶ್ರೀಮಂತನು ‘ನೀನು ಈ ಊರಿನಲ್ಲಿ ಎಲ್ಲರಿಗಿಂತ ತುಂಬಾ ಬುದ್ಧಿವಂತನೆಂದು ಹೇಳುತ್ತಾರೆ. ನಾನು ಈಗ ನಿನ್ನನ್ನು ಪರೀಕ್ಷಿಸುತ್ತೇನೆ. ಎಲ್ಲಿ ನನ್ನನ್ನು ಈ ಕುರ್ಚಿ ಬಿಟ್ಟು ಏಳುವಂತೆ ಮಾಡು ನೋಡೋಣ’ ಎಂದು ಸವಾಲು ಹಾಕಿದ.

ಐಶಿಗೆ ಗಲಿಬಿಲಿಯಾಯಿತು. ಅವನು ಅದನ್ನು ತೋರಗೊಡದೆ ಒಂದು ಕ್ಷಣ ಯೋಚಿಸಿ ಬಹಳ ಭಯ ಭಕ್ತಿಯಿಂದ ‘ಮಹಾಸ್ವಾಮಿ! ನೀವು ಈ ಊರಿಗೆ ಹಿರಿಯರು. ಮೇಲಾಗಿ ಭಾರೀ ಶ್ರೀಮಂತರಲ್ಲದೆ ಮುಖಂಡರೂ ಹೌದು. ಈಗ ತಾವು ಕುಳಿತಿರುವ ಆಸನ ಸಾಮಾನ್ಯವಾದುದಲ್ಲ. ಅದು ಪವಿತ್ರವಾದ ಸ್ಥಾನವಾಗಿದೆ. ಇಂತಹ ಪವಿತ್ರವಾದ ಆಸನದ ಮೇಲೆ ಕುಳಿತಿರುವವರ ಜೊತೆ ಯಾರೂ ತಮಾಷೆ ಮಾಡುವುದು ಸಭ್ಯತೆಯಲ್ಲ. ನೀವು ನಿಜವಾಗಿಯೂ ನನ್ನೊಡನೆ ಪಂದ್ಯ ಹೂಡುವುದೇ ಆದರೆ ಇಗೋ ಈ ಕಡೆ ಇರುವ ಕೊನೆಯ ಕುರ್ಚಿಯ ಮೇಲೆ ಕುಳಿತುಕೊಳ್ಳಿ. ಆಗ ನಿಮ್ಮನ್ನು ನಾನು ಸೋಲಿಸುತ್ತೇನೆಯೋ ಇಲ್ಲವೋ ನೀವೇ ನೋಡಿ’ ಎಂದ.

ಶ್ರೀಮಂತನಿಗೆ ಈ ಮಾತು ನಿಜವೆನ್ನಿಸಿತು. ಅವನು ತಾನು ಕುಳಿತಿರುವ ಈ ಆಸನ ದೊಡ್ಡ ಸ್ಥಾನವನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಅದರ ಮೇಲೆ ಕುಳಿತು ಸವಾಲು ಹಾಕುವುದು ಸರಿಯಲ್ಲ ಎಂದು ಯೋಚಿಸಿದವನೇ ಕೂಡಲೇ ತಾನು ಕುಳಿತಿದ್ದ ಕುರ್ಚಿಯಿಂದ ಎದ್ದು ಐಶಿ ತೋರಿಸಿದ ಕುರ್ಚಿಯ ಮೇಲೆ ಕುಳಿತುಕೊಂಡ. ನಂತರ ಐಶಿಯನ್ನು ಕುರಿತು ‘ಈಗ ನನ್ನ ಸವಾಲಿಗೆ ಏನು ಹೇಳುತ್ತೀಯಾ? ಸೋಲೊಪ್ಪಿಕೊಳ್ಳುವೆಯಾ?’ ಎಂದು ಪ್ರಶ್ನಿಸಿದನು.

ಅದಕ್ಕೆ ಐಶಿ ‘ಮಹಾಸ್ವಾಮಿ! ನಿಮ್ಮ ಸವಾಲನ್ನು ನಾನು ಸ್ವೀಕರಿಸಿಯೂ ಆಯಿತು. ಅದರಲ್ಲಿ ಜಯಶಾಲಿಯೂ ಆಗಿದ್ದೇನೆ. ನೀವು ಕುಳಿತಿದ್ದ ಕುರ್ಚಿಯಿಂದ ನಿಮ್ಮನ್ನು ನಾನು ಈಗಾಗಲೇ ಎಬ್ಬಿಸಿ ಬಿಟ್ಟಿದ್ದೇನೆ. ಅದನ್ನು ನೀವು ಗಮನಿಸಿಲ್ಲವೆಂದು ತೋರುತ್ತದೆ’ ಎಂದವನೇ ‘ಮಹಾಸ್ವಾಮಿ ನಾನಿನ್ನು ಬರುತ್ತೇನೆ’ ಎನ್ನುತ್ತ ತನ್ನ ಮನೆಗೆ ನಡೆದನು. ಶ್ರೀಮಂತ ಗರ್ವಭಂಗದಿಂದ ಅವಮಾನಿತನಾದ.

**-ಎಂ.ಕೆ.ಮಂಜುನಾಥ್, ಬೆಂಗಳೂರು**

---

## ನಿಮಗೆಷ್ಟು ಗೊತ್ತು — ಹುಲಿ



1) ಮಾರ್ಜಾಲ ಗುಂಪಿನಲ್ಲಿ ಅತ್ಯಂತ ದೊಡ್ಡ ಪ್ರಾಣಿ ಹುಲಿ.

2) ಹುಲಿ ಹೆದರುವ ಏಕೈಕ ಶತ್ರು ಮಾನವ.

3) ಹುಲಿಗಳು ಏಕಾಂಗಿ ಜೀವಿಗಳಾದರೂ ಅವುಗಳಿಗೆ ತಮ್ಮದೇ ಆದ ಸಂಕೀರ್ಣ ಸಮಾಜವಿದೆ.

4) ಶರೀರ ಪೋಷಣೆಗೆ ಹುಲಿಗೆ ಒಂದು ವರ್ಷಕ್ಕೆ 40–50 ಗೊರಸುಳ್ಳ ಪ್ರಾಣಿಗಳ ಅಗತ್ಯವಿದೆ. ಮರಿಗಳನ್ನು ಬೆಳೆಸುತ್ತಿರುವ ಹೆಣ್ಣು ಹುಲಿಗೆ 60–70 ಗೊರಸುಳ್ಳ ಬಲಿ ಪ್ರಾಣಿಗಳು ಬೇಕು.

5) ಹುಲಿಯ ದೇಹದ ಮೇಲಿನ ಪಟ್ಟೆಗಳ ವಿನ್ಯಾಸದ ವ್ಯತ್ಯಾಸಗಳಿಂದ ಹುಲಿಯನ್ನು ಗುರುತಿಸಿ, ನಿಖರವಾಗಿ ಎಣಿಸಲು ಸಾಧ್ಯ.

6) ಹುಲಿಯ ಒಟ್ಟು ಉದ್ದ ಗಂಡು 270–310 ಸೆಂ.ಮೀ. ಹೆಣ್ಣು: 240–265 ಸೆಂ.ಮೀ.
ತೂಕ: ಗಂಡು 175–260 ಕಿ.ಗ್ರಾಂ. ಹೆಣ್ಣು: 100–175ಕಿಗ್ರಾಂ.

7) ಗರ್ಭಾವಧಿ 103–110 ದಿನಗಳು.
ಮರಿಗಳು 1 ರಿಂದ 7, 3 ಮರಿಗಳು ಸಾಮಾನ್ಯ.

8) ಗರಿಷ್ಠ ಆಯಸ್ಸು: 12–15 ವರ್ಷಗಳು.
ಬಂಧನದಲ್ಲಿ 20 ಅಥವಾ ಹೆಚ್ಚು.

9) ಬಲಿ ಪ್ರಾಣಿಗಳು ಸಮೃದ್ಧವಾಗಿರುವ ಅರಣ್ಯದಲ್ಲಿ 100 ಚ.ಕಿ.ಮೀ.ಗೆ 10–15 ಹುಲಿಗಳು, ಉಳಿದ ಕಡೆಗಳಲ್ಲಿ 100 ಚ.ಕಿ.ಮೀಗೆ 1–2 ಹುಲಿಗಳಿವೆ. ರಾಜ್ಯದಲ್ಲಿ ಸುಮಾರು 400–420 ಹುಲಿಗಳಿವೆ.

(ಆಧಾರ): **ಸದಾನಂದ ಹೆಗಡೆಕಟ್ಟೆ, ಮೂಡಬಿದಿರೆ**